ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಪೂರೈಸುವ ಬಗ್ಗೆ

೧೯೪೮. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿಗೂ ವಿದ್ಯುಚ್ಛಕ್ತಿ ಪೂರೈಕೆಯಾಗಿರುವುದು ನಿಜವೆ ?

ಆ) ಬೆಳ್ತಂಗಡಿ ತಾಲ್ಲೂಕಿನ ನೀರಾವರಿ ಪಂಪಿಗೆ ವಿದ್ಯುಚ್ಛಕ್ತಿ ಜೋಡಣೆಗೆ ಸಾಕಷ್ಟು ಸಲಕರಣೆಗಳ ಪೂರೈಕೆಯಲ್ಲಿ ವಿಳಂಬವಾಗಿ ಗಾಬರಾಂತರ ಪ್ರದೇಶದ ಸಣ್ಣ ಮತ್ತು ಚಿಕ್ಕ ರೈತರು ತಾವು ಬೆಳೆದ ಬೆಳೆಗಳಿಗೆ ನೀರು ಒದಗಿಸಲು ವಿಫಲರಾಗಿ ಬವಣೆ ಪಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ತಾಲ್ಲೂಕಿಗೆ ಅವಶ್ಯ ಬೇಕಾಗಿರುವ ವಿದ್ಯುಚ್ಛಕ್ತಿ ಸಲಕರಣೆಗಳನ್ನು ಮತ್ತು ಅರ್ಜಿ ಸಲ್ಲಿಸಿದ ಪ್ರಯೋಜನಾರ್ಥಿಗಳ ನೀರಾವರಿ ಪಂಪುಸೆಟ್ಟುಗಳಿಗೆ ಎಷ್ಟು ಸಮಯದೊಳಗೆ ವಿದ್ಯುದ್ದೀಕರಣ ಮಾಡಲಾಗುವುದು ?

ಈ) ೧೯೬೬-೬೭ ನೇ ಸಾಲಿನಲ್ಲಿ ಎಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ನೀರಾವರಿ ಪಂಪುಸೆಟ್ಟುಗಳಿಗೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ?

ಶ್ರೀ ಜೆ. ಹೆಚ್. ಪಟೇಲ್, (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳು). —

ಅ) ನಿಜ.

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಪ್ರತಿ ವರ್ಷವೂ ನೀರಾವರಿ ಪಂಪುಸೆಟ್ಟುಗಳಿಗೆ ಬರುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಗಿಂತ ತುಂಬಾ ಅಧಿಕವಾಗಿದೆ.

ವರ್ಷ	ನೊಂದಾಯಿಸಿದ ಅರ್ಜಿಗಳ ಸಂಖ್ಯೆ	ವಾರ್ಷಿಕ ಗುರಿ
೧೯೫೫-೬೬	೬೦೦	೨೧೦
೧೯೬೬-೬೭	೫೯೧	೨೦೦

(೧-೪-೬೬ ರಿಂದ ೨೮-೨-೬೭ ರವರೆಗೆ)

ವಾರ್ಷಿಕ ಗುರಿ ಲಭ್ಯವಿರುವ ಹಣಕ್ಕನುಗುಣವಾಗಿ ನಿಗದಿ ಮಾಡಲಾಗುತ್ತದೆ. ಇದರಿಂದಾಗಿ ಹಲವಾರು ಪ್ರಕರಣಗಳಲ್ಲಿ ವಿಳಂಬ ಅನಿವಾರ್ಯ. ಈ ಸ್ಥಿತಿ ರಾಜ್ಯದ ಎಲ್ಲೆಡೆಗಳಲ್ಲೂ ಇದೆ.

ಇ) ಬೆಳ್ತಂಗಡಿ ತಾಲ್ಲೂಕಿಗೆ ವಾರ್ಷಿಕ ಗುರಿಗೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ. ದಿನಾಂಕ ೨೮-೨-೬೭ ರ ವೇಳೆಗೆ ಈ ತಾಲ್ಲೂಕಿನಲ್ಲಿ ೨೯೨ ಅರ್ಜಿಗಳು ಬಾಕಿ ಉಳಿದಿದ್ದವು. ಇವುಗಳಿಗೆಲ್ಲಾ ವಿದ್ಯುತ್ ಒದಗಿಸಲು ಸುಮಾರು ೧ ವರ್ಷ ಬೇಕಾಗುತ್ತದೆ.

ಈ) ಬೆಳ್ತಂಗಡಿ ತಾಲ್ಲೂಕಿನಲ್ಲಿ ೧೯೬೬-೬೭ನೇ ಸಾಲಿನಲ್ಲಿ ೧-೪-೬೬ ರಿಂದ ೨೮-೨-೧೯೬೭ರ ವರೆಗೆ ೧೪೧ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಬೆಂಗಳೂರಿನಲ್ಲಿರುವ ವಿದ್ಯುಚ್ಛಕ್ತಿ ಮಂಡಳಿಯ ಇಂಜಿನಿಯರುಗಳ ಬಗ್ಗೆ

೨೧೬೪. ಶ್ರೀ ಎನ್. ಎಸ್. ಜೋಡ್‌ರವರು (ಇಂಡಿ).—ವಾಣಿಜ್ಯ, ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ಇಂಜಿನಿಯರುಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಬೆಂಗಳೂರು ನಗರದಲ್ಲಿರುವವರ ಸಂಖ್ಯೆ ಎಷ್ಟು ?

ಇ) ಪಶ್ಚು ವರ್ಷಕ್ಕಿಂತ ಹೆಚ್ಚು ಸಮಯ ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ?